INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -2, July-August, 2022,
PageNo,23-33
Peer Reviewed Journal, Referred Journal

# ಮಿರ್ಜಾ ಇಸ್ಮಾಯಿಲ್ ಮತ್ತು ಬೆಂಗಳೂರು ಗಣಪತಿ ಗಲಭೆ ಕುರಿತ ವಿಶ್ಲೇಷಣೆ

ಎಸ್ ಬಿ ಬೋರೇಗೌಡ.[1]
ಡಾ. ಎಸ್. ನರೇಂದ್ರ ಪ್ರಸಾದ್[2]

ಮೈಸೂರು ಸಂಸ್ಥಾನದಲ್ಲಿ ಹೈದರ್ ಮತ್ತು ಟಿಪ್ಪು ಸುಲ್ತಾನನ ಕಾಲದಲ್ಲಿ ಅನೇಕ ಮುಸ್ಲಿಮರು ಉನ್ನತ ಹುದ್ದೆಗಳನ್ನು ಪಡೆದುಕೊಂಡಿದ್ದರು. ಆದರೆ, 1799ರಲ್ಲಿ ಒಡೆಯರ ಕುಟುಂಬಕ್ಕೆ ಅಧಿಕಾರ ಹಸ್ತಾಂತರದಿಂದಾಗಿ ಮುಸ್ಲಿಂರು ಸಂಸ್ಥಾನದ ರಾಜಕೀಯ ಕ್ಷೇತ್ರದಿಂದ ದೂರ ಉಳಿಯುವಂತಾಯಿತು. ಅವರ ಸ್ಥಾನವನ್ನು ನಿಧಾನವಾಗಿ ಬ್ರಾಹ್ಮಣರು ಆಕ್ರಮಿಸಿಕೊಂಡರು. ಕಾಲನಂತರ ಮುಸ್ಲಿಮರು ಬ್ರಾಹ್ಮಣೇತರರ ಗುಂಪಿನಲ್ಲಿ ತಮ್ಮನ್ನು ಗುರುತಿಸಿಕೊಂಡರು. ಇವರ ಸಾಕ್ಷರತೆಯ ಪ್ರಮಾಣ 1927ರ ವೇಳೆಗೆ ಒಟ್ಟು ಜನಸಂಖ್ಯೆಯ ಶೇಕಡಾ 46.1ರಷ್ಟಿತ್ತು. ಇಂಗ್ಲಿಷ್ ಭಾಷೆಯ ಸಾಕ್ಷರತೆಯಲ್ಲೂ ಇವರು ಶೇಕಡ 6ರಷ್ಟಿದ್ದರು.[1] ಈ ವೇಳೆಗೆ ಸಂಸ್ಥಾನದಲ್ಲಿ ಬ್ರಾಹ್ಮಣೇತರ ಚಳವಳಿ ಆರಂಭವಾಗಿತ್ತು. ಪ್ರಜಾಪ್ರತಿನಿಧಿ ಸಭೆಗೆ ಈ ಕೋಮಿನ ಸದಸ್ಯರು ನಾಮಕರಣ ಹೊಂದಿದ್ದರು. ಈ ವೇಳೆಗೆ ಸಂಸ್ಥಾನದಲ್ಲಿ ಪ್ರಜಾಮಿತ್ರ ಮಂಡಳಿ ಸ್ಥಾಪನೆಯಾಗಿತ್ತು. ಪ್ರಜಾಮಿತ್ರ ಮಂಡಳಿಯಲ್ಲಿ ಹಿಂದುಳಿದ ಜಾತಿ/ ವರ್ಗಗಳನ್ನು ಪ್ರತಿನಿಧಿಸಿದ್ದ ಎಸ್.ಸಿ. ಮಲ್ಲಯ್ಯ, ಯಶೋಧರ ದಾಸಪ್ಪ, ಟಿ.ಆರ್. ಚೆನ್ನಿಗರಾಮಯ್ಯ, ವಿ.ವೆಂಕಟಪ್ಪ, ಸಿ.ಆರ್. ರೆಡ್ಡಿ, ಬೋರಯ್ಯ, ಖಾಜಿ ಸಯ್ಯದ್ ಯುಸೂಫ್ ಸೇಠ್, ಮೊದಲಾದವರಿದ್ದರು. ಇವರಲ್ಲಿ ಅಬ್ಬಾಸ್ ಖಾನ್ ಸಹಾ ಇದ್ದು ಪ್ರಮುಖ ನಾಯಕರಾಗಿದ್ದರು. ಉನ್ನತ ಸ್ಥಾನಕ್ಕೆ ಏರಿದ ಬ್ರಾಹ್ಮಣರನ್ನು ಇವರು ದ್ವೇಷಿಸುತ್ತಿದ್ದರು.

ಮೈಸೂರು ಸಂಸ್ಥಾನದ ರಾಜಕೀಯ ಚರಿತ್ರೆ ಕಾಲದಂದರ್ಭದ ಸರಿಸುಮಾರು 1928ರಲ್ಲಿ ಪ್ರಕ್ಷುಬ್ಧ ವಾತಾವರಣವೂ ಕೂಡ ನಿರ್ಮಾಣವಾಯಿತು. ಏಕೆಂದರೆ, ಸರ್ ಮಿರ್ಜಾ ಇಸ್ಮಾಯಿಲ್ ಅವರು ಸಂಸ್ಥಾನದ ದಿವಾನರಾದ ಮೇಲೆ ಇಲ್ಲಿನ ರಾಜಕೀಯ ಇತಿಹಾಸದಲ್ಲಿ ಪ್ರಮುಖ ಬೇಡಿಕೆಗಳು ಬ್ರಾಹ್ಮಣೇತರರ ಬದಲು ಬ್ರಾಹ್ಮಣರಿಂದಲೇ ಬಂದವು. ಮಿರ್ಜಾ ಇಲ್ಮಾಯಿಲ್ ಅವರ ನೇಮಕ ಕೆಲವು ಬ್ರಾಹ್ಮಣ ಮುಖಂಡರಿಗೆ ಇಷ್ಟವಾಗಿರಲಿಲ್ಲ. ಇದರ ಪ್ರತಿರೋಧವು 1927ರ ಅಕ್ಟೋಬರ್‌ನಲ್ಲಿ ದಸರಾ ಮೆರವಣಿಗೆಯಲ್ಲಿ ಬಹಿರಂಗಗೊಂಡಿತು. ಹೀಗಾಗಿ ಮಿರ್ಜಾ ಇಸ್ಮಾಯಿಲ್ ಅವರನ್ನು ವಿರೋಧಿಸುವ

[1].ಸಂಶೋಧನ ವಿದ್ಯಾರ್ಥಿ,ಚರಿತ್ರೆ ವಿಭಾಗ, ಕನ್ನಡ ವಿಶ್ವ ವಿದ್ಯಾನಿಲಯ, ಹಂಪಿ
[2] .ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, (ವಿಶ್ರಾಂತ),ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ) ಸರಸ್ವತಿಪುರಂ, ಮೈಸೂರು

ಒಂದು ಗುಂಪು ಸಕ್ರಿಯವಾಯಿತು. ಇದರ ಮುಂದುವರೆದ ಘಟನೆಯೇ ಬೆಂಗಳೂರಿನ ಗಣಪತಿ ಗಲಭೆ ಎಂದು ಗುರುತಿಸಬಹುದಾಗಿದೆ.

**ಗಣಪತಿ ಗಲಭೆ**

ಮಿರ್ಜಾ ಇಸ್ಮಾಯಿಲ್ ಅವರ ಕಾಲದಲ್ಲಿ ಸಂಭವಿಸಿದ ಘಟನೆಗಳಲ್ಲಿ ಸುಲ್ತಾನ್ ಪೇಟೆ ಗಲಭೆ ಬಹಳ ಪ್ರಮುಖ ಘಟನೆಯಾಗಿದೆ. ಈ ಗಲಭೆಯು ಸಂಸ್ಥಾನದಲ್ಲಿನ ಚಳುವಳಿಗಳ ದಿಕ್ಕನ್ನು ಬದಲಾಯಿಸಿತು. ಇದು ಸಂಸ್ಥಾನದಲ್ಲಿ ನಡೆದ ಮೊದಲ ಕೋಮು ಗಲಭೆಯೇ ಆಗಿರುತ್ತದೆ. ಅನೇಕರು ದಿವಾನರು ತಮ್ಮ ಆಶಯಕ್ಕೆ ಪೂರವಾಗಿ ಆಡಳಿತ ನಡೆಸಬೇಕೆಂದು ಬಯಸಿದ್ದರು. ಮಿರ್ಜಾ ಇಸ್ಮಾಯಿಲ್ ಅವರು ಇದಕ್ಕೆ ಒಪ್ಪದಿದ್ದಾಗ ಅವರ ವಿರುದ್ಧ ಕುತಂತ್ರಗಳಲ್ಲಿ ತೊಡಗಿದರು. ದಿವಾನರು ಕೋಮುವಾದಿಗಳನ್ನು ಓಲೈಸಲು ಮಿಲ್ಲರ್ ಸಮಿತಿ ವರದಿಯ ಅನುಷ್ಠಾನದಿಂದ ಅರ್ಹ ಮತ್ತು ದಕ್ಷರಾದವರಿಗೆ ನ್ಯಾಯ ದೊರೆತಿಲ್ಲವೆಂಬ ಕಾರಣದಿಂದ ವರದಿಯಲ್ಲಿ ಕೆಲವು ಮಾರ್ಪಾಡು ಮಾಡಿದರು.

ಮಿರ್ಜಾ ಇಸ್ಮಾಯಿಲ್ ಅವರ ಈ ಕ್ರಮ ಬಹುಸಂಖ್ಯಾತ ಬ್ರಾಹ್ಮಣೇತರ ಮುಖಂಡರನ್ನು ಸರ್ವೇಸಾಮಾನ್ಯವಾಗಿ ಅತೃಪ್ತಗೊಳಿಸಿತು. ಬ್ರಾಹ್ಮಣ ಪಂಗಡಗಳನ್ನು ಒಲಿಸಿಕೊಳ್ಳಲು ಮಿರ್ಜಾ ಇಸ್ಮಾಯಿಲ್ ಅವರು ಈ ರೀತಿ ಮಾಡಿದ್ದರು. ಸರ್ಕಾರದ ನೀತಿಗಳನ್ನು ವಿರೋಧಿಸುತ್ತಿದ್ದ, ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದ ಕೆಲವು ವ್ಯಕ್ತಿಗಳು ತಮ್ಮ ಅಸಮಾಧಾನಗಳನ್ನು ಬಹಿರಂಗವಾಗಿ ವ್ಯಕ್ತಪಡಿಸುತ್ತಿದ್ದರು. ಈ ಚಳವಳಿ ಪ್ರಾರಂಭದಲ್ಲಿ ಕೇವಲ ಶಿಕ್ಷಣ ಮತ್ತು ಉದ್ಯೋಗದಲ್ಲಿನ ಮೀಸಲಾತಿಗೆ ಮಾತ್ರ ಸೀಮಿತವಾಗಿತ್ತು. ಮಿರ್ಜಾ ಇಸ್ಮಾಯಿಲ್ ಅವರನ್ನು ವಿರೋಧಿಸಲು ಬ್ರಾಹ್ಮಣೇತರರ ಪಂಗಡಗಳ ಕೆಲವು ಮುಖಂಡರು ಬ್ರಾಹ್ಮಣೇತರ ಚಳುವಳಿಯನ್ನು ಬಳಸಿಕೊಂಡರು. ಹಿಂದುಳಿದ ವರ್ಗಗಳ ಒಗ್ಗಟ್ಟು ಮುರಿಯುವುದು ಬ್ರಾಹ್ಮಣವಾದಿಗಳಿಗೆ ಅನಿವಾರ್ಯವಾಯಿತು. ಅದಕ್ಕೆ ಗಣಪತಿ ಗಲಭೆ ಇವರ ನೆರವಿಗೆ ಬಂದಿತು. ಇದೇ ವೇಳೆಗೆ ಮಹಾರಾಜರು ಅಧಿಕಾರ ಸ್ವೀಕರಿಸಿದ ಬೆಳ್ಳಿ ಹಬ್ಬದ ಅಂಗವಾಗಿ ನಡೆದ ಮೆರವಣಿಗೆಯ ಅಂಬಾರಿಯಲ್ಲಿ ಮಹಾರಾಜರ ಒತ್ತಾಸೆ ಮೇರೆಗೆ ಮಿರ್ಜಾ ಇಸ್ಮಾಯಿಲ್ ಅವರು ಕುಳಿತಿದ್ದರು. ಇದನ್ನು ಸಹಿಸದ ಕೆಲವು ಕೋಮುವಾದಿಗಳು ಅಂಬಾರಿಯತ್ತ ಚಪ್ಪಲಿ ತೂರಿ ಗಲಭೆ ಎಬ್ಬಿಸಲು ಪ್ರಯತ್ನಿಸಿದರು.[2]

ಬೆಂಗಳೂರಿನ ಆರ್ಕಾಟ್ ಶ್ರೀನಿವಾಸಚಾರ್ಯರ ರಸ್ತೆಯಲ್ಲಿ ಎಸ್.ಆರ್.ನಂಜುಂಡಯ್ಯ ಅವರ ಹಿಂದೂ–ಆಂಗ್ಲೋ ವರ್ನಾಕ್ಯುಲರ್ ಶಾಲೆಯು 1908ರಲ್ಲಿ ಸ್ಥಾಪನೆಯಾಗಿತ್ತು. ಈ ಶಾಲೆಯ ಎದುರಿಗೆ ಪುರಸಭೆ ಅಧ್ಯಕ್ಷರಾಗಿದ್ದ ಅಬ್ಬಾಸ್‌ಖಾನ್ ಅವರ ಮನೆ ಇತ್ತು. ಇವರು ಬೆಂಗಳೂರಿನ ನಾಗರೀಕರಲ್ಲಿ ಓರ್ವ ಪ್ರಮುಖ ವ್ಯಕ್ತಿಯಾಗಿದ್ದು, ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳ ಸದಸ್ಯರಾಗಿದ್ದು ಬ್ರಾಹ್ಮಣೇತರ ಪಕ್ಷದ ನಾಯಕರಾಗಿ ಬ್ರಾಹ್ಮಣರ ಕಟು ಟೀಕಾಕಾರರಾಗಿದ್ದರು. ಇವರು ಪುರಸಭೆಯ

ಚುನಾವಣೆಯಲ್ಲಿ ಬ್ರಾಹ್ಮಣ ಅಭ್ಯರ್ಥಿಯನ್ನು ಸೋಲಿಸಿದ್ದು, ದಿವಾನರ ವೈಯುಕ್ತಿಕ ಸ್ನೇಹಿತರಾಗಿದ್ದರು. ಜೊತೆಗೆ ಸರ್ಕಾರದ ವಾರ್ಷಿಕ ಆಯವ್ಯಯ ಕುರಿತು ಹೆಚ್ಚು ಟೀಕೆ ಮಾಡುತ್ತಿದ್ದರು. ಈ ಶಾಲೆಯ ಆವರಣದಲ್ಲಿ ಗಣಪತಿ ಹಾಗೂ ಇತರೆ ಕೆಲವು ವಿಗ್ರಹಗಳಿದ್ದವು. ಈ ಗಣಪತಿ ವಿಗ್ರಹಕ್ಕೆ ವಿದ್ಯಾರ್ಥಿಗಳು ಒಬ್ಬ ಗುತ್ತಿಗೆದಾರನ ಸಹಾಯದಿಂದ 1928ರಲ್ಲಿ ಒಂದು ಸಣ್ಣ ಗೂಡು ಕಟ್ಟಿಸಿದ್ದರು. ಇದು ಹೀಗಾದದ್ದನ್ನು 'ವೀರಕೇಸರಿ', 'ಪ್ರಜಾಮಿತ್ರ' 'ನವಜೀವನ' ಮತ್ತು 'ಮೈಸೂರು ಸ್ಟಾರ್' ಪತ್ರಿಕೆಗಳು ಪ್ರಕಟಿಸಿದವು. 'ಗಣೇಶನು ಕತ್ತಲೆ ಮನೆಯಲ್ಲಿ ತನ್ನಷ್ಟಕ್ಕೆ ತಾನೇ ಪ್ರಲಾಪ ಮಾಡಿಕೊಂಡನಂತೆ' ಎಂದು ಪತ್ರಿಕೆಗಳು ಬರೆದವು. ವಿದ್ಯಾರ್ಥಿಗಳು ಗಣೇಶನ ಭಕ್ತರಾಗಿದ್ದರು. ಅಬ್ಬಾಸ್‌ಖಾನ್ ಅವರು ಇದನ್ನು ಗಮನಿಸಿ ಒಂದು ಗುಡಿ ಕಟ್ಟುತ್ತಿದ್ದಾರೆಂದು ಭಾವಿಸಿದರು. ಹಿಂಬದಿಯಲ್ಲಿದ್ದ ಉರ್ದು ಶಾಲೆಗೆ ಈ ಶಾಲೆಯ ಮೂಲಕವೇ ಹೋಗುತ್ತಿದ್ದ ವಿದ್ಯಾರ್ಥಿಗಳೂ ಅಬ್ಬಾಸ್‌ಖಾನ್ ಅವರ ಹೇಳಿಕೆಗೆ ಪ್ರಚಾರ ನೀಡಿದರು. ಪಕ್ಕದಲ್ಲಿಯೇ ಇದ್ದ ನಾಲಬಂದವಾಡಿಯ ಮುಸ್ಲಿಮರು ಇದನ್ನು ನಿಜವೆಂದು ನಂಬಿದರು.[3] ಪತ್ರಿಕೆಗಳಲ್ಲಿ ಪ್ರಕಟವಾದ ತರುವಾಯ ಗಣಪತಿ ವಿಗ್ರಹವನ್ನು ಮತ್ತೆ ಬೆಳಕಿಗೆ ತಂದು ಹಿಂದಿನ ಸ್ಥಳದಲ್ಲಿ ಇಟ್ಟು ಪೂಜೆ ಮಾಡಲಾಯಿತು. ಈ ಪೂಜೆ ಮಾಡುವ ಜಾಗ ಅಬ್ಬಾಸ್‌ಖಾನ್ ಅವರ ಮನೆಯ ಹೆಬ್ಬಾಗಿಲಿಗೆ ನೇರವಾಗಿತ್ತು. ಇದು ಮುಸಲ್ಮಾನರಿಗೆ ಅಸಮಾಧಾನ ಉಂಟುಮಾಡಿತು. ಇದು ಗಣಪತಿ ಗಲಭೆಗೆ ದಾರಿಯಾಯಿತು.[4]

ಅಬ್ಬಾಸ್ ಖಾನ್ ಅವರ ಮನೆಯ ಮುಂದೆ ಗಣೇಶನಿಗೆ ವಿದ್ಯಾರ್ಥಿಗಳು ಪೂಜೆ ಆರಂಭಿಸಿದರು. ಅಬ್ಬಾಸ್ ಖಾನ್ ಅವರು ಉದ್ದೇಶಪೂರ್ವಕವಾಗಿ ಶಾಲೆಯ ಆವರಣದಿಂದ ವಿಗ್ರಹವನ್ನು ತೆಗೆದಿರುವುದು ಹಿಂದೂಧರ್ಮಕ್ಕೆ ಮಾಡಿದ ಅವಮಾನವೆಂದು ಇದಕ್ಕಾಗಿ ಎಲ್ಲಾ ಹಿಂದೂಗಳು ಒಗ್ಗೂಡಿ ಹೋರಾಡಬೇಕೆಂದು ಮುಖಂಡರು ತಿಳಿಸಿದರು. ಅಲ್ಲದೆ ವಿಗ್ರಹಕ್ಕೆ ಜೀರ್ಣೋದ್ಧಾರವಾಗದಿರಲು ಅಬ್ಬಾಸ್ ಖಾನ್ ಅವರು ಕಾರಣವೆಂಬ ವದಂತಿಗಳು ಹರಡಿದವು. ಈ ವದಂತಿ ಹೆಚ್ಚು ಪ್ರಚಾರ ಪಡೆದುಕೊಂಡಿತು. ಇದರಿಂದ ರೊಚ್ಚಿಗೆದ್ದ ವಿದ್ಯಾರ್ಥಿಗಳು ಮತ್ತು ಯುವಕರು ಬೆಂಗಳೂರಿನ ಅನೇಕ ಬೀದಿಗಳಲ್ಲಿ ಪ್ರತಿಭಟನೆ ನಡೆಸಿದರು. ಈ ಘಟನೆಗೆ ಪ್ರಚೋದನೆ ಕೊಟ್ಟ ಕೆಲವು ಬ್ರಾಹ್ಮಣ ಯುವಕರನ್ನು ಬಂಧಿಸಲಾಯಿತು. ಈ ಬಂಧನದ ಸುದ್ಧಿ ಬಹು ಬೇಗ ಹರಡಿತು. ಆ ದಿನ ರಾತ್ರಿ ಪೋಲಿಸರು ಗುಂಡು ಹಾರಿಸಿದಾಗ ಕೆಲವರು ಸತ್ತರೆಂದೂ, ಮುಸ್ಲಿಂರಲ್ಲಿ ಗೂಂಡಾಗಳಾಗಿದ್ದವರು ಕೆಲವು ಹಿಂದೂಗಳನ್ನು ಅಬ್ಬಾಸ್‌ಖಾನ್ ಅವರ ಮನೆಯೊಳಗೆ ಎಳೆದುಕೊಂಡು ಹೋಗಿ ಹತ್ಯೆ ಮಾಡಿದರು ಎಂಬ ಮೊದಲಾದ ವದಂತಿಗಳು ಕಾಳ್ಗಿಚ್ಚಿನಂತೆ ಹಬ್ಬಿದವು.[5]

ಶಾಲೆಯ ಅಂಗಳದಲ್ಲಿ ಗಣೇಶನ ಗುಡಿಯನ್ನು ಕಟ್ಟುತ್ತಿದ್ದಾರೆಂದು ಮಾಹಿತಿ ಮಿರ್ಜಾ ಇಸ್ಮಾಯಿಲ್ ಅವರಿಗೆ ದೊರೆಯಿತು. ಈ ಗುಡಿಯನ್ನು ನಿರ್ಮಿಸಲು ಮುಖ್ಯೋಪಾಧ್ಯಾಯರು ಮೇಲಾಧಿಕಾರಿಗಳ

ಅನುಮತಿ ಪಡೆದಿರಲಿಲ್ಲ ಎಂಬ ಮಾಹಿತಿಯೂ ಅವರಿಗೆ ದೊರೆಯಿತು. ದಿವಾನರ ಆಪ್ತ ಕಾರ್ಯದರ್ಶಿ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಬರೆದ ಪತ್ರದಲ್ಲಿ ಸುಲ್ತಾನ್‌ಪೇಟೆ ಎ.ವಿ. ಶಾಲೆಯಲ್ಲಿ ಗಣೇಶನ ವಿಗ್ರಹವೊಂದನ್ನಿಟ್ಟು ಇದಕ್ಕೆ ಗುಡಿ ಕಟ್ಟುತ್ತಿರುವುದಾಗಿಯೂ ಅದರಿಂದ ಪಕ್ಕದಲ್ಲಿರುವ ಮಸೀದಿಗೆ ಬರುವ ಭಕ್ತಾಧಿಗಳಿಗೆ ತೊಂದರೆಯಾಗದಂತೆ, ಕ್ರಮವಹಿಸಬೇಕೆಂದು ತಿಳಿಸಲಾಗಿತು.[6] ಶಿಕ್ಷಣ ಇಲಾಖೆಯ ನಿರ್ದೇಶಕರಾದ ಸುಬ್ಬರಾಯರು ಗಣೇಶನ ಮೂರ್ತಿಯಿದ್ದಂತಹ ಎ.ವಿ. ಶಾಲೆಯ ಹೆಬ್ಬಾಗಿಲಿನ ಮೂಲಕವೇ ಮುಸ್ಲಿಮ್‌ರು ಹಾದು ಹೋಗಬೇಕಾಗಿದ್ದು, ಆದ್ದರಿಂದ ಘರ್ಷಣೆ ಸಂಭವಿಸಬಾರದೆಂದು ಭಾವಿಸಿ ಗಣೇಶನ ವಿಗ್ರಹವನ್ನು ಪುನಃ ಪ್ರತಿಷ್ಠಾಪನೆ ಮಾಡುವುದು ಬೇಡವೆಂದು ಗಣೇಶನ ವಿಗ್ರಹವನ್ನು ಕೊಠಡಿಯಲ್ಲಿಟ್ಟು ಬೀಗಹಾಕಬೇಕೆಂದು ತಿಳಿಸಿರುವುದಾಗಿ ಸರ್ಕಾರಕ್ಕೆ ವರದಿ ಮಾಡಿದರು.[7]

ಅಬ್ಬಾಸ್‌ಖಾನ್ ದಬ್ಬಾಳಿಕೆಯಿಂದ ಗಣೇಶನ ವಿಗ್ರಹವನ್ನು ಬೇಕೆಂತಲೇ ನಾಶಪಡಿಸಲಾಗಿದೆ ಮತ್ತು ಅವರ ಮನೆ ಶಾಲೆಯ ಮುಂಭಾಗದಲ್ಲಿಯೇ ಇರುವುದರಿಂದ ಹೀಗೆ ಮಾಡಿದ್ದಾರೆ ಎಂಬ ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾಯಿತು.[8] ಈ ರೀತಿಯ ಸುದ್ದಿ ಅಂದಿನ ಪ್ರಮುಖ ಪತ್ರಿಕೆಗಳಾದ ಪ್ರಜಾಮಿತ್ರ, ನವಜೀವನ, ಮೈಸೂರ್ ಸ್ಟಾರ್ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಬೆಂಗಳೂರಿನಲ್ಲಿ ಮುಖಂಡರಾದ ಎಚ್.ವಿ. ಸುಬ್ರಮಣ್ಯಂ ಆ ಶಾಲೆಯ ಹುಡುಗರ ಜೊತೆಗೆ ಇತರ ಶಾಲೆಗಳ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ ಗಣೇಶನ ವಿಗ್ರಹ ಸ್ಥಾಪನೆಗೆ ಒತ್ತಾಯ ಪಡಿಸಿದರು. ವಿದ್ಯಾರ್ಥಿಗಳು ಶಾಲೆಯ ಮುಂಭಾಗದಲ್ಲಿ ನಮ್ಮ ಗಣೇಶನನ್ನು ಪುನಃ ಪ್ರತಿಷ್ಠಾಪನೆ ಮಾಡಿ ಇಲ್ಲದಿದ್ದರೆ ನಾವು ಶಾಲೆಯೊಳಗೆ ಬರುವುದಿಲ್ಲ ಎಂದು ಪ್ರತಿಭಟಿಸಿದರು. ಶಾಲೆಯ ಮುಖ್ಯೋಪಾಧ್ಯಾಯರು ಶಾಲೆ ಮತ್ತು ಅದರ ಸಿಬ್ಬಂದಿಯ ಸುರಕ್ಷತೆ ಹಾಗೂ ಭದ್ರತೆಯ ಬಗೆಗೆ ಆತಂಕಗೊಂಡ[9] ಮುಖೋಪಾಧ್ಯಾಯರು ಪೊಲೀಸರಿಗೆ ದೂರು ನೀಡಿದರು.

ಎಚ್.ವಿ. ಸುಬ್ರಮಣ್ಯಂರ ಮುದಾಳತ್ವದಲ್ಲಿ ವಿದ್ಯಾರ್ಥಿಗಳು ಚಳವಳಿ ಆರಂಭಿಸಿದರು. ಇವರ ಜೊತೆಗೆ ಮತ್ತೊಬ್ಬ ಮುಖಂಡರಾದ ರಾಮಲಾಲ್ ತಿವಾರಿ ಸೇರಿಕೊಂಡರು. ವಿದ್ಯಾರ್ಥಿಗಳ ಗುಂಪು ಚಿಕ್ಕಪೇಟೆ, ಬಳೇಪೇಟೆ ಭಾಗಗಳಲ್ಲಿ ಸಂಚರಿಸಿ ಕೂಗಾಡುತ್ತಾ ಕಲ್ಲು ತೂರುತ್ತಾ ಅಕ್ಕಿಪೇಟೆ, ಅರಳೇಪೇಟೆ, ಚಾಮರಾಜಪೇಟೆಗಳಲ್ಲಿ ಪ್ರತಿಭಟನೆ ನಡೆಸಿದರು. ಗಲಭೆ ತೀವ್ರ ಸ್ವರೂಪ ಪಡೆಯಿತು. ಪ್ರತಿಭಟನೆಕಾರರು ಭಜನೆ ಮತ್ತು ಧಾರ್ಮಿಕ ಗೀತೆಗಳನ್ನು ಹಾಡುವ ಮೂಲಕ ಜನರನ್ನು ಸೆಳೆದರು. ಆರ್ಕಾಟ್ ಶ್ರೀನಿವಾಸಚಾರ್ ಬೀದಿಯಲ್ಲಿ ಜನರ ಗುಂಪು ಮುನ್ನುಗ್ಗುತ್ತಿದ್ದ ಸಮಯದಲ್ಲಿ ಪೊಲೀಸರು ಗುಂಡು ಹಾರಿಸಲು ಸಿದ್ಧರಾಗಿ ನಿಂತಿದ್ದರು. ಈ ವೇಳೆಗೆ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್ ಚಿತ್ರಗುಪ್ತ ಪತ್ರಿಕೆಯ ಸಂಪಾದಕರಾದ ಮದ್ದೂರಿನ ಎಚ್.ಕೆ. ವೀರಣ್ಣಗೌಡರ ಬಳಿ ಬಂದು ಜನರನ್ನು ಶಾಂತಗೊಳಿಸಿ ಎಂದು ಕೇಳಿಕೊಂಡರು. ವೀರಣ್ಣಗೌಡರು ಪ್ರತಿಭಟನಕಾರರನ್ನು ಸಮಾಧಾನಗೊಳಿಸಲು ಪ್ರಯತ್ನಿಸಿದರು. ಪೊಲೀಸರು ಪ್ರತಿಭಟನೆಕಾರರ ಮೇಲೆ ಗುಂಡು ಹಾರಿಸಿದರು.

ಗುಂಡು ಮುಗಿದುದರಿಂದ ಪ್ರತಿಭಟನೆಕಾರರು ಪೊಲೀಸರ ವಿರುದ್ಧ ತಿರುಗಿಬಿದ್ದರು. ಜಿಲ್ಲಾ ಮ್ಯಾಜಿಸ್ಟ್ರೇಟ್ ನಾರಾಯಣಸ್ವಾಮಿ ಅವರ ತಲೆಗೆ ಪೆಟ್ಟು ಬಿತ್ತು. ಗಲಭೆಯಲ್ಲಿ ಸೇರಿಕೊಂಡು ಕಲ್ಲು ಎಸೆಯುತ್ತಿದ್ದರೆಂದು ಆಪಾದಿಸಿ ವೀರಣ್ಣಗೌಡ, ರಾಮಯ್ಯ, ಸುಬ್ರಮಣ್ಯಂ, ಭೀಮರಾವ್ ಮೊದಲಾದವರನ್ನು ಪೊಲೀಸರು ದಸ್ತಗಿರಿ ಮಾಡಿದರು.[10]

ಪ್ರತಿಭಟನೆ ಹೆಚ್ಚಾದಂತೆ ವಿಶ್ವಕರ್ನಾಟಕ ಪತ್ರಿಕೆಯ ಸಂಪಾದಕರಾದ ತಿರುಮಲೆ ತಾತಾಚಾರ್ಯ ಶರ್ಮ ಮತ್ತು ಹಿಂದೂ ಮಹಾಸಭಾದ ಮುಖಂಡರಾದ ಶಂಕರನಾರಾಯಣರಾವ್[11] ಸುಲ್ತಾನ್ ಪೇಟೆಗೆ ಬಂದು ವಿದ್ಯಾರ್ಥಿಗಳೊಡನೆ ಚರ್ಚಿಸಿ ದಿವಾನರನ್ನು ಭೇಟಿ ಮಾಡಿ ಸಂದರ್ಭ ವಿವರಿಸಿ ಮುಖಂಡರನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಂಡರು. ಕೌನ್ಸಿಲರ್ ಆಗಿದ್ದ ಜಾರ್ಜ್ ಮ್ಯಾಥನ್ ಶಾಲೆಗೆ ಭೇಟಿ ನೀಡಿ ಅಲ್ಲಿ ನಡೆಯುತ್ತಿದ್ದ ಸತ್ಯಾಗ್ರಹ, ಗಲಭೆ, ಗದ್ದಲಗಳನ್ನು ಖುದ್ದಾಗಿ ನೋಡಿ ಮನವಿ ಸ್ವೀಕರಿಸಿ ಗಣಪತಿ ವಿಗ್ರಹವನ್ನು ಪುನಃ ಸ್ವಸ್ಥಾನದಲ್ಲಿ ಪ್ರತಿಷ್ಠಾಪನೆ ಮಾಡಿಸುವುದಾಗಿ ಭರವಸೆಯಿತ್ತರು.[12] ಇದರಿಂದ ಕತ್ತಲಲ್ಲಿದ್ದ ಗಣಪತಿ ಹೊರಗೆ ಬಂದರೂ ಪ್ರತಿಭಟನೆ ನಿಲ್ಲಲಿಲ್ಲ. ಪ್ರತಿಭಟನೆಯ ವೇಳೆಯಲ್ಲಿ ದಸ್ತಗಿರಿಯಾಗಿದ್ದ ಮುಖಂಡರು ಜೈಲಿನಲ್ಲಿದ್ದರು. ವಿದ್ಯಾರ್ಥಿಗಳ ಗುಂಪು ಜೈಲಿನ ಕಡೆ ಹೊರಟು ತಮ್ಮ ಮುಖಂಡರನ್ನು ಬಿಡಿಸಲು ಮುಂದಾಯಿತು. ಈ ವೇಳೆಯಲ್ಲಿ ಮೈಲಾರಯ್ಯ ಎಂಬ ಹುಡುಗ ಪೊಲೀಸರ ಕುದುರೆ ತುಳಿತಕ್ಕೆ ಸಿಕ್ಕಿ ಗಂಭೀರವಾದ ಗಾಯದಿಂದ ತನ್ನ ಕಾಲು ಕಳೆದುಕೊಂಡನು.[13]

ಹೋರಾಟ ತೀವ್ರ ಸ್ವರೂಪ ಪಡೆದುಕೊಂಡಿತು. ವಿದ್ಯಾರ್ಥಿಗಳ ಗುಂಪನ್ನು ನಿಯಂತ್ರಿಸಲು ಕುದುರೆ ಸವಾರರನ್ನು ನಿಯೋಜಿಸಲಾಯಿತು. ತೀವ್ರತರವಾದ ಪ್ರತಿಭಟನೆ ಮತ್ತು ಹೋರಾಟದ ಫಲವಾಗಿ ಜೈಲಿನಲ್ಲಿದ್ದ ಮುಖಂಡರನ್ನು ಬಿಡುಗಡೆ ಮಾಡಲಾಯಿತು. ಬಿಡುಗಡೆಯ ನಂತರ ಅವರು ಸಂಭ್ರಮದಿಂದ ಗಣಪತಿಗೆ ಪೂಜೆ ಮಾಡಿದರು. ಈ ಸಂತೋಷ ಸಂಭ್ರಮಗಳು ಮುಸ್ಲಿಂ ಬಾಂಧವರನ್ನು ಕೆರಳಿಸಿತು. ಕೆಲವು ಮುಸಲ್ಮಾನರು 'ದೀನ್-ದೀನ್' ಎಂದು ಕೂಗುತ್ತಾ ಲಾಠಿ ಹಿಡಿದು ಹಿಂದೂಗಳ ಮೇಲೆ ಬಿದ್ದರು. ಪೂಜೆ ಮುಗಿದ ಅನಂತರ ಕಲ್ಲು ಮತ್ತು ಚಪ್ಪಲಿಯನ್ನು ವಿಗ್ರಹದ ಕಡೆಗೆ ಎಸೆಯಲಾಯಿತು.[14] ಎಲ್ಲಿಂದಲೋ ಗುಂಡುಗಳು ಹಾರಿದವು. ಒಂಟಿಯಾಗಿ ಹೋಗುತ್ತಿದ್ದ ಹಿಂದೂಗಳನ್ನು ಮುಸಲ್ಮಾನರು ಹೊಡೆಯತೊಡಗಿದರು. ಹಿಂದೂಗಳು ಧೈರ್ಯತಾಳಿ ಸಂಘಟಿತರಾಗಿ ಮುಸಲ್ಮಾನರ ಮೇಲೆ ತಿರುಗಿ ಬಿದ್ದರು. ಒಂದು ತಿಂಗಳ ಕಾಲ ಈ ಪ್ರಕ್ಷುಬ್ಧ ಪರಿಸ್ಥಿತಿ ಬೆಂಗಳೂರಿನಲ್ಲಿ ಕಂಡುಬಂದಿತು. ಈ ಗಲಭೆಯ ಕೋಲಾಹಲ ಸುದ್ದಿ ಲಂಡನ್ನಿನ 'ಡೇಲಿಮೇಲ್' ಪತ್ರಿಕೆಯಲ್ಲಿ ಪ್ರಕಟಗೊಂಡು ಮೈಸೂರು ಸರ್ಕಾರವನ್ನು ಪೇಚಿಗೆ ಸಿಲುಕಿಸಿತು.[15]

ಸರ್ಕಾರ ಒಂದು ಪ್ರಕಟಣೆ ಹೊರಡಿಸಿ ಗೋಲಿಬಾರ್ ಮಾಡಿರುವುದನ್ನು ನಿರಾಕರಿಸಿತು. ಆದರೆ 'ಇಂಡಿಯನ್ ಡೇಲಿಮೇಲ್' ಎಂಬ ಬೊಂಬಾಯಿ ಮೂಲದ ಪತ್ರಿಕೆ ಭುಜದಲ್ಲಿ ಗುಂಡಿನ ಗಾಯವಾಗಿದ್ದ

ಚಂದ್ರರಾಜ ಎಂಬ ಬಾಲಕನ ಭಾವಚಿತ್ರ ಪ್ರಕಟಿಸಿತು. ಆಗ ನ್ಯಾಯ ವಿಧಾಯಕ ಸಭೆ ನಡೆಯುತ್ತಿತ್ತು. ಸುಳ್ಳು ಪ್ರಕಟಣೆ ಹೊರಡಿಸಿದೆ ಎಂಬ ನಿಂದನೆಗೆ ಸರ್ಕಾರ ಒಳಗಾಯಿತು.[16] ತೀವ್ರ ರೀತಿಯ ಪ್ರತಿಭಟನೆಯಲ್ಲಿ ತೊಡಗಿದ್ದ ಜನರನ್ನು ನಿಯಂತ್ರಿಸಲು ಪೋಲಿಸರಿಗೆ ಸಾಧ್ಯವಾಗದೆ ಮೈಸೂರಿನಿಂದ ವಿಶೇಷ ಮಿಲಿಟರಿ ತುಕಡಿ ಹಾಗೂ ಅಶ್ವದಳವನ್ನು ತರಿಸಿ ಉದ್ರಿಕ್ತ ಗುಂಪನ್ನು ಚದುರಿಸಲಾಯಿತು. ಸೈನಿಕರು ಮತ್ತು ಕುದುರೆ ಸವಾರರು, ಪೋಲಿಸ್ ಅಧಿಕಾರಿಗಳು ರಾತ್ರಿಯೆಲ್ಲಾ ಬೀದಿಗಳಲ್ಲಿ ಗಸ್ತು ತಿರುಗಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಪ್ರಯತ್ನಿಸಿದರು. ಕಾರ್ಯಾಚರಣೆಯಲ್ಲಿ ಅನೇಕ ಯುವಕರು ಮತ್ತು ಮಕ್ಕಳು ಗಾಯಗೊಂಡರು. ಕೊನೆಗೆ ಗಲಭೆ ಸಂಪೂರ್ಣವಾಗಿ ಶಮನಗೊಂಡು ನಗರದಲ್ಲಿ ಶಾಂತಿ ನೆಲೆಸಿತು. ಸರ್ಕಾರ ಸೂಕ್ತ ಸಮಯದಲ್ಲಿ ಜಾಗೃತಗೊಂಡು ಶಾಂತಿ ನೆಲೆಸುವಲ್ಲಿ ಕಾರ್ಯೋನ್ಮುಖವಾಯಿತು.[17]

ಸುಲ್ತಾನ್ ಪೇಟೆ ಗಲಭೆಯ ಕಾರಣಗಳು ಅದರ ಸತ್ಯಾಂಶಗಳು ಮತ್ತು ಮುಂದಿನ ಕ್ರಮಗಳ ಕುರಿತು ವಿಚಾರಣೆ ನಡೆಸಿ ವರದಿ ನೀಡಲು ಸರ್ಕಾರ ಮೋಕ್ಷಗುಂಡಂ ಎಂ. ವಿಶ್ವೇಶ್ವರಯ್ಯ ಅವರ ಅಧ್ಯಕ್ಷತೆಯಲ್ಲಿ ಒಂದು ವಿಚಾರಣಾ ಸಮಿತಿಯನ್ನು ಜುಲೈ 1928 ರಂದು ನೇಮಿಸಿತು. ಜಸ್ಟಿಸ್ ಡಿ.ಕೆ.ರಾಮರಾವ್ ಮೈಸೂರಿನ ಮುಖ್ಯ ನ್ಯಾಯಾಲಯದ ನ್ಯಾಂಯಾಧೀಶರು, ಎಚ್.ಜಿ. ಬಸವಯ್ಯ ಅವರು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರು, ಗುಲಾಂ ಅಹಮದ್ ಕಲಾಮಿ, ವಿ.ಮಾಣಿಕ್ಯವೇಲು ಮೊದಲಿಯಾರ್, ಬ್ಯಾರಿಸ್ಟರ್ ಬಿ. ನಾಗಪ್ಪ ಅವರು ಕಾನೂನು ಇಲಾಖೆಯ ಕಾರ್ಯದರ್ಶಿ, ರಾಲ್ಫ್ ನೈ ಅವರು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ಇವರನ್ನು  ಈ ಸಮಿತಿಯ ಸದಸ್ಯರನ್ನಾಗಿ ನೇಮಿಸಿತು. ಈ ಸಮಿತಿ ಎರಡು ತಿಂಗಳಿಗೂ ಹೆಚ್ಚು ಕಾಲ ಸಭೆ ಸೇರಿ ವಿಚಾರಣೆ ನಡೆಸಿ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಈ ವಿಚಾರಣೆಯಲ್ಲಿ ಹಿಂದೂಗಳ ಪರವಾಗಿ– ಸಂಪಿಗೆ ವೆಂಕಟಪತಯ್ಯ, ಮಹಮದೀಯರ ಪರವಾಗಿ– ಮಹಮದ್ ಷರೀಫ್ ಖಲೀಲ್, ವಿದ್ಯಾರ್ಥಿಗಳ ಪರವಾಗಿ– ಕೆ. ಶಿವಣ್ಣ, ಪತ್ರಿಕೆಗಳ ಪರವಾಗಿ– ವಿ.ಎಸ್. ಸಂಜೀವರಾವ್, ಪ್ರಧಾನ ಸಾಕ್ಷಿಗಳಾಗಿ– ಮಾಸ್ಟರ್ ಚಂದ್ರರಾಜ್, ಎನ್. ನರಸಿಂಹ ಅಯ್ಯಂಗಾರ್, ಅಬ್ದುಲ್ ಸಮನ್ ಖಾನ್, ಎಂ.ಪಿ. ಸೋಮಶೇಖರರಾಯ, ನಂಜಪ್ಪ, ಕೆ. ಸಿದ್ದರಾಮಪ್ಪ, ಅಬ್ದುಲ್ ಲತೀಫ್, ರಾಮಯ್ಯ, ಮೈಸೂರು ಮೈಲಾರಯ್ಯ, ಎನ್. ವೆಂಕಟಸುಬ್ಬಯ್ಯ, ಸಬ್ಇನ್ಸ್‌ಪೆಕ್ಟರ್ ಶೇಷಾದ್ರಿ ಅಯ್ಯರ್, ಪಾಮಡಿ ಸುಬ್ಬರಾಮ ಶೆಟ್ಟಿ, ಬಿ. ಅಬ್ದುಲ್ ರೆಹ್ಮಾನ್ ಖಾನ್ ಅವರು ಸಮಿತಿಯ ಮುಂದೆ ಹಾಜರಾಗಿ ತಮ್ಮ ಸಾಕ್ಷ್ಯ ನೀಡಿದರು.[18]

ವಿಚಾರಣಾ ಸಮಿತಿಯು ಸರ್ಕಾರಕ್ಕೆ 18–12–1928ರಂದು ತನ್ನ ವರದಿಯನ್ನು ಸಲ್ಲಿಸಿತು. ಸಂಸ್ಥಾನದಲ್ಲಿ ಕಂಡುಬಂದಿರುವ ರಾಜಕೀಯ ಅತೃಪ್ತಿ ಮತ್ತು ಅಶಾಂತಿ ನಿವಾರಿಸುವ ಕ್ರಮಗಳನ್ನು ಕುರಿತು ಸರ್ಕಾರಕ್ಕೆ  ಕೆಲವು ಶಿಫಾರಸ್ಸು ಮಾಡಿತು.[19] ಅವುಗಳೆಂದರೆ;

1. ಸಾಕಾದಷ್ಟು ಉದ್ಯೋಗಾವಕಾಶಗಳಿದ್ದು ಜನರು ಸುಖ ವಸತಿಗಳನ್ನು ಕಲ್ಪಿಸಿಕೊಂಡು ನೆಮ್ಮದಿಯ ಜೀವನ ನಡೆಸುವಂತಾದಾಗ ಸಂಸ್ಥಾನದ ಪ್ರಜೆಗಳಲ್ಲಿ ತೃಪ್ತಿ, ಶಾಂತಿ ಉಂಟಾಗಿ ಜಗಳಕ್ಕೆ ಕಾರಣ ಇರುವುದಿಲ್ಲ.
2. ಪ್ರಜೆಗಳ ತೃಪ್ತಿಗೆ ಆಡಳಿತ ಜವಾಬ್ದಾರಿಯನ್ನು ಜನರಿಗೂ ಕೂಡ ಹಂಚಬೇಕು. ಶಾಸನಬದ್ಧವಾದ ರಾಜಪ್ರಭುತ್ವ ಏರ್ಪಾಡಾಗಬೇಕು, ಉದಾರವಾದ ರಾಜಕೀಯ ಸುಧಾರಣೆಗಳನ್ನು ಕೊಟ್ಟಾಗ ಜನರಿಗೆ ರಾಜರಲ್ಲಿ ಭಕ್ತಿ, ವಿಶ್ವಾಸಗಳು ಸಹಜವಾಗಿ ಬೆಳೆಯುತ್ತವೆ.
3. ಮಿಲ್ಲರ್ ಸಮಿತಿಯ ಫಲ ಸಂಸ್ಥಾನದ ಪ್ರಜೆಗಳಲ್ಲಿ ಯಾದವೀಕಲಹ, ಏನು, ಎಲ್ಲಿ ತಪ್ಪಾದರೂ ಜವಾಬ್ದಾರಿಯನ್ನೆಲ್ಲ ಸರ್ಕಾರದ ಮೇಲೆ ಹಾಕುವ ಚಾಳಿ ಬಲವಾಗುತ್ತಿದೆ. ಈ ಮಾರ್ಗ ಹಿಡಿದರೆ ಯಾವ ದೇಶ ಮುಂದೆ ಬರುವುದಿಲ್ಲ.
4. ಬ್ರಾಹ್ಮಣರ ಪಿತೂರಿ ವಾದಕ್ಕೆ ಬುಡವಿಲ್ಲ, ಸ್ವಾತಂತ್ರ್ಯಕ್ಕಾಗಿ ತಲೆಹಾಕುವ ಸಾರ್ವಜನಿಕ ಚಟುವಟಿಕೆಯನ್ನಾಗಲಿ, ಪತ್ರಿಕಾ ಲೇಖನಗಳನ್ನಾಗಲಿ, ದರ್ಪದಿಂದ ಮಟ್ಟಹಾಕಲೆತ್ನಿಸುವುದು ಈ ಯುಗಧರ್ಮಕ್ಕೆ ವಿರೋಧ. ಬ್ರಿಟಿಷ್ ಭಾರತದಲ್ಲಿರುವ ಮಟ್ಟದ ಸ್ವಾತಂತ್ರ್ಯವಾದರೂ ಸಂಸ್ಥಾನದ ಪತ್ರಿಕೆಗಳಿಗಿರಬೇಕು.
5. ಮೈಸೂರು ರಾಜ್ಯದಲ್ಲಿ ಅಧಿಕಾರ ಸೂತ್ರಗಳೆಲ್ಲ ಒಂದೇ ಕಡೆ ಕೇಂದ್ರಿಕೃತವಾಗಿದೆ. ಅಧಿಕಾರವನ್ನು ಚಲಾಯಿಸಬೇಕಾದ ನಾನಾ ಇಲಾಖೆಯು, ಮುಖ್ಯಸ್ಥರು ತಮ್ಮ ಕೆಲಸ ನಡೆಸುವುದರಲ್ಲಿ ಕೇಂದ್ರದ ಕಡೆ ನೋಡುತ್ತಾರೆ ಹೊರತು ಸತ್ಯವೇನು ಎಂಬುದನ್ನು ಸ್ವತಂತ್ರವಾಗಿ ವಿಚಾರ ಮಾಡುವುದಿಲ್ಲ.

ಬ್ರಾಹ್ಮಣರ ಒಂದು ಗುಂಪು ಈ ಸೂಕ್ಷ್ಮ ವಾತಾವರಣವನ್ನು ಕೋಮುಗಲಭೆಗೆ ಬಳಸಿಕೊಂಡಿತೆಂದು ಸಮಿತಿ ವರದಿ ನೀಡಿತು. ಗಣಪತಿ ಗಲಭೆ ಪ್ರಾರಂಭವಾದ ಸಮಯದಲ್ಲಿ ಅತೃಪ್ತ ಮುಖಂಡರು ಆಡಳಿತವನ್ನು ಅಪಖ್ಯಾತಿಗೊಳಿಸಲು ಇದನ್ನು ಬಳಸಿಕೊಂಡರು. ಇದಕ್ಕೆ ಪೂರಕವೆಂಬಂತೆ ಸಂಸ್ಥಾನದ ಕೆಲವು ಪತ್ರಿಕೆಗಳು ಸಹಕರಿಸಿದವು. ಇದು ನಿಸ್ಸಂಶಯವಾಗಿ ಆಡಳಿತದ ಸದುದ್ದೇಶದ ವಿರುದ್ಧ ಭಾವನೆ ಮತ್ತು ಅನುಮಾನದ ತೀವ್ರತೆಯನ್ನು ಹೆಚ್ಚಿಸಿತು[20] ಎಂದು ಸಮಿತಿ ತಿಳಿಸಿತು.

ಆಡಳಿತದಲ್ಲಿ ಜನತಾ ಪ್ರತಿನಿಧಿಗಳಿಗೆ ಅಧಿಕಾರವಿರಬೇಕೆಂದು ಸಮಿತಿ ಅಭಿಪ್ರಾಯಪಟ್ಟಿತು. ಜನತೆಯ ಆಶೋತ್ತರಗಳನ್ನು ವಿವರಿಸಿ ಇನ್ನೂ ಹೆಚ್ಚು ಕಾಲ ಜನರ ರಾಜಕೀಯ ದಾಹ ತೃಪ್ತಿಪಡಿಸದಿದ್ದರೆ ವಿನಾಯಕನ ಗಲಭೆಯಂತಹ ಅಸಮಾಧಾನ ಜನತೆಯಿಂದ ತಡೆಗಟ್ಟಲು ಸಾಧ್ಯವಾಗಲಾರದು ಎಂದು ಸಮಿತಿ ತಿಳಿಸಿತು.[21] ಈ ಗಲಭೆ ಕುರಿತು ಮಿರ್ಜಾ ಇಸ್ಮಾಯಿಲ್ ಅವರು 'ಪ್ರಾಮುಖ್ಯತೆಯಿಲ್ಲದ ಈ

ಘಟನೆಗೆ ಮಹತ್ವ ತಂದ ಉತ್ಸಾಹ ಹಿಂಸೆಗೆ ಕಾರಣವಾಗಿ, ಮನಸ್ಸಿನಲ್ಲಿದ್ದ ದ್ವೇಷ ಸಂಸ್ಥಾನದ ಚಿತ್ರಣ ಬದಲಾವಣೆಗೆ ಕಾರಣವಾಯಿತು'. ಈ ಚಿತ್ರಣ ಸತ್ಯಕ್ಕೆ ಬಲವಾದ ಸುಳ್ಳಾಗಿತ್ತು.[22] 'ಅಂದು ಬೆಂಗಳೂರು ಪುರಸಭೆಯ ಅಧ್ಯಕ್ಷರಾಗಿದ್ದ ಒಬ್ಬ ಮುಸ್ಲಿಂ ರಾಜಕಾರಣಿ ಈ ಗಲಭೆಗೆ ನಿಜವಾಗಿ ಕಾರಣ ಪುರುಷ" ಎಂದು ಮಿರ್ಜಾ ಇಸ್ಮಾಯಿಲ್ ಅವರು ಹೇಳಿದ್ದಾರೆ. ಅವರಲ್ಲಿದ್ದ ಹಲವು ನ್ಯೂನತೆಗಳು ಅವರು ಬಹುಜನ ಹಿಂದೂಗಳ ವಿಶ್ವಾಸ ಕಳೆದುಕೊಳ್ಳುವಂತೆ ಮಾಡಿದ್ದವು ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಈ ಗಲಭೆ ಉಭಯಮತೀಯರಲ್ಲಿ ಕಹಿ ವಾತಾವರಣ ಮೂಡಿಸಿತು[23] ಎಂದು ಅಭಿಪ್ರಾಯಪಡಲಾಗಿದೆ.

ಗಣಪತಿ ಗಲಭೆ ಸರ್ಕಾರ ಮತ್ತು ಬ್ರಾಹ್ಮಣೇತರ ಚಳುವಳಿಯನ್ನು ಮುಸ್ಲಿಮಂ ಮುಖಂಡರ ವಿರುದ್ಧ ನಿರ್ದೇಶಿಸಿ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ಅಬ್ಬಾಸ್ ಖಾನ್ ಅವರು ತನ್ನ ಪ್ರಭಾವ ಕಳೆದುಕೊಂಡರು. ಇದರಿಂದಾಗಿ ಬ್ರಾಹ್ಮಣೇತರ ಚಳುವಳಿ ಇಬ್ಭಾಗಗೊಂಡಿತು. ಈ ಗಲಭೆ ಬ್ರಾಹ್ಮಣರು ಮತ್ತು ಹಿಂದುಳಿದ ವರ್ಗಗಳ ನಡುವೆ ಸಾಕಷ್ಟು ಆಂದೋಲನ ಮತ್ತು ಕೋಮು ದ್ವೇಷವನ್ನು ಸೃಷ್ಟಿಸಿತು.[24] ಇದನ್ನು ಕುರಿತು ವಿಶ್ವಕರ್ನಾಟಕ ಪತ್ರಿಕೆ 1930ನೇ ಆಗಸ್ಟ್ 31 ರಂದು 'ಲಂಬೋದರ ಪ್ರಹಸನ' ಎಂದು ವರದಿ ಮಾಡಿರುವುದನ್ನು ಪ್ರಸ್ತುತ ಗುರುತಿಸಬಹುದಾಗಿದೆ.

ಬೆಂಗಳೂರಿನಲ್ಲಿ ಪ್ರಾರಂಭವಾದ ಈ ಗಲಭೆಯ ವಿಷಯವು ಒಂದು ನೆಪವಾಗಿತ್ತು. ಇದು ಜನರು ತಮ್ಮ ರಾಜ ಅಥವಾ ರಾಜ್ಯಕ್ಕಿಂತ ತಮ್ಮ ಧರ್ಮಕ್ಕೆ ಹೆಚ್ಚು ಬದ್ಧರಾಗಿದ್ದರಿಂದ ಕೋಮುಗಲಭೆಗೆ ಕಾರಣವಾಯಿತು. ಇದರಿಂದ ಕೋಮು ಹಿಂಸಾಚಾರವು ಉಳಿಯಿತು, ಇದು ಕಣ್ಮರೆಯಾಗಲಿಲ್ಲ. ಇದಕ್ಕೆ ಪೂರಕವೆಂಬಂತೆ ಜುಲೈ 31 ಮತ್ತು ಸೆಪ್ಟೆಂಬರ್ 1, 1928ರ ನಡುವೆ ಬೆಂಗಳೂರು ನಗರದಲ್ಲಿ ಅನೇಕ ಕೋಮು ಹಲ್ಲೆ ಪ್ರಕರಣಗಳು ನಡೆದವು. ಇದರ ಜೊತೆಗೆ ಸಂಸ್ಥಾನದ ಇತರ ಭಾಗಗಳಲ್ಲಿ ಕೋಮುಗಲಭೆಯ ಘಟನೆಗಳು ವರದಿಯಾದವು. ದಾವಣಗೆರೆಯಲ್ಲಿ 1928ರ ಸೆಪ್ಟೆಂಬರ್ 21 ರಂದು ಗಣೇಶನ ಮೆರವಣಿಗೆಗೆ ಸಂಬಂಧಿಸಿದಂತೆ ಗಲಭೆ ಸಂಭವಿಸಿ ಹಲವಾರು ಜನರು ಗಾಯಗೊಂಡರು.[25] ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲೂ ಇದೇ ರೀತಿಯ ಪ್ರಕರಣಗಳು ನಡೆದವು. ಮೈಸೂರು ಸಂಸ್ಥಾನದ ಹಲವು ಕಡೆ 1928ರ ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಸುಮಾರು 16 ರಿಂದ 17 ದೇವಾಲಯಗಳ ಮೂರ್ತಿಗಳುನಾಶವಾದವು. ಅವುಗಳಲ್ಲಿ ಕುಣಿಗಲ್ ತಾಲ್ಲೂಕಿನ ಹೇಮಗಿರಿಯ ಮಲ್ಲಿಕಾರ್ಜುನ ಒಂದು. ದೇವಾಲಯಗಳಲ್ಲಿ ನೀಚ ಕೃತ್ಯಗಳಾಗಿ ದೇವತಾಮೂರ್ತಿಗಳು ಚೂರುಚೂರಾಗಿ ಅನೇಕ ಮೂರ್ತಿಗಳಿಗೆ ಅಮೇಧ್ಯಾಭಿಷೇಕಗಳಾಗಿ ಪಾದರಕ್ಷಾ ಮಾಲಿಕೆಗಳಅಲಂಕಾರಗಳಾದವು. [26]ಎಂದು ಅನೇಕ ಪತ್ರಿಕೆಗಳು ತಿಳಿಸಿವೆ. ಈ ಗಲಭೆ ಸಂಸ್ಥಾನಕ್ಕೆ ಅನಿರೀಕ್ಷಿತವಾಗಿತ್ತು.

ಕೃತಕವಾಗಿ ನಿರ್ಮಾಣವಾದ ಈ ಸಂದಿಗ್ಧ ಪರಿಸ್ಥಿತಿಯಿಂದಾಗಿ ಈ ಎರಡೂ ಸಮುದಾಯಗಳು ಪರಸ್ಪರ ಅನುಮಾನದಿಂದಲೇ ಬದುಕುವುದು ಅನಿವಾರ್ಯವಾಯಿತು. ಪಟ್ಟಣಗಳ ಜನರಲ್ಲೂ ಭೀಕರವಾದ ಆತಂಕ ನಿರ್ಮಾಣವಾಯಿತು. ಕೆಲವು ಪತ್ರಿಕೆಗಳು ಅಧಿಕಾರಕ್ಕಾಗಿ ಅಗೌರವ ಮತ್ತು ಹಿಂಸಾತ್ಮಕ ಧ್ವನಿಯನ್ನು ಬೆಳಸಿಕೊಂಡು ಸಾರ್ವಜನಿಕರ ಮನಸ್ಸಿನ ಮೇಲೆ ಪರಿಣಾಮ ಬೀರಿದ್ದು ಆರೋಗ್ಯಕರ ಬೆಳವಣಿಗೆಯಾಗಿರಲಿಲ್ಲ. ಸ್ಥಳೀಯ ಮಾಧ್ಯಮವು ಪ್ರಜ್ಞಾಪೂರ್ವವಾಗಿ ಕೋಮು ದ್ವೇಷ ಮತ್ತು ಅಸೂಯೆಯನ್ನು ಪ್ರಚೋಧಿಸಲು ಕಾರಣವಾಯಿತು. ಬೆಂಗಳೂರಿನ ಗಲಭೆಗೆ ಪತ್ರಿಕೆಗಳು ಮಾತ್ರ ಕಾರಣವೆಂದು 1928ರ ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯರಾದ ಎಂ.ರಾಮದಾಸ್ ಎಂಬುವರು ಅಭಿಪ್ರಾಯಪಟ್ಟರು. ಇದರ ಪ್ರಭಾವ ಗ್ರಾಮಗಳಿಗೂ ಹರಡಿತು.[27] ಇಡೀ ಘಟನೆಯನ್ನು ರಾಜಕೀಯಕರಣಗೊಳಿಸಿ ಕೋಮುವಾದದ ಬೀಜ ಬಿತ್ತಲು ಅನೇಕರು ಇದನ್ನು ಬಳಸಿಕೊಂಡರು.

ಮಿರ್ಜಾ ಇಸ್ಮಾಯಿಲ್ ಅವರು ಆಡಳಿತದಲ್ಲಿ ಆಧಿಕಾರಿಗಳನ್ನು ಶಿಕ್ಷಿಸುವ ನಿರ್ಧಾರ ಕೈಗೊಂಡು ವಿರೋಧಿಗಳ ಬಾಯಿ ಮುಚ್ಚಿಸಿದರು. ಅವರು ಮಿಲ್ಲರ್ ಸಮಿತಿ ವರದಿಗೆ ತಿದ್ದುಪಡಿ ತಂದಾಗ ಬಹು ಸಂಖ್ಯಾತರಾದ ಹಿಂದುಳಿದವರಿಗೆ ಅಸಮಾಧಾನವಾಯಿತು. ಇದನ್ನು ಬಳಸಿಕೊಂಡ ಇವರ ವಿರೋಧಿಗಳು ಬ್ರಾಹ್ಮಣರನ್ನು ಒಲೈಸಿಕೊಳ್ಳಲು ಈ ರೀತಿ ತಿದ್ದುಪಡಿ ತಂದರೆಂಬ ಸುದ್ದಿ ಹರಡಿ ಕೋಮುಗಲಭೆಗೆ ದಾರಿ ಮಾಡಿಕೊಟ್ಟರು. ಮಿರ್ಜಾ ಇಸ್ಮಾಯಿಲ್ ಅವರ ನೀತಿ ವಿರೋಧಿಸುತ್ತಿದ್ದ ರಾಜಕೀಯ ವಿರೋಧಿಗಳು ಬೆಂಗಳೂರಿನಲ್ಲಿ ಗಣಪತಿ ಗಲಭೆಗೆ ಕುಮ್ಮಕ್ಕು ನೀಡಿ ಕೋಮು ಗಲಭೆಗೆ ದಾರಿ ಮಾಡಿಕೊಟ್ಟರು. ಈ ಗಲಭೆಯ ಬಗೆಗೆ ವರದಿ ನೀಡಲು ಸರ್ಕಾರ ಒಂದು ಸಮಿತಿ ನೇಮಿಸಿತು. ಈ ಸಮಿತಿಯ ವರದಿ ಪ್ರಕಟಿಸುವಲ್ಲಿ ಸರ್ಕಾರ ನಿಧಾನಗತಿ ಪ್ರದರ್ಶಿಸಿತು. ಇದು ಸರ್ಕಾರದ ತಪ್ಪನ್ನು ಮರೆಮಾಚಿಸುವ ವ್ಯವಸ್ಥೆಯಾಗಿತ್ತು. ಮಿರ್ಜಾ ಇಸ್ಮಾಯಿಲ್ ಅವರು ಈ ಗಲಭೆಗೆ ಕೆಲವರು ಮಾಡಿದ ಕುತಂತ್ರ ಕಾರಣ ಎಂದು ಅಭಿಪ್ರಾಯಪಟ್ಟರು. ಮಹಾರಾಜರು ಹೊಂದಿದ್ದ ನಂಬಿಕೆ ಮತ್ತು ಶ್ರೀರಕ್ಷೆ ಅವರನ್ನು ಕಾಪಾಡಿತು. ದಿವಾನರು ತಮ್ಮ ಮತ್ತು ಮಹಾರಾಜರ ಮೇಲೆ ಯಾರಾದರೂ ಅವಹೇಳನದ ರೀತಿಯಲ್ಲಿ ವರ್ತಿಸಿದರೆ ಅದನ್ನು ಸಹಿಸದ ಅವರು ರಾಜಪ್ರಭುತ್ವದ ಪರವಾದ ನಿಲುವು ಹೊಂದಿದ್ದರು.

**ಕೊನೆಯ ಟಿಪ್ಪಣಿ**

1. ರಿಪೋರ್ಟ್ ಆಫ್ ಎಂ.ವಿಶ್ವೇಶ್ವರಯ್ಯ ಕಮಿಟಿ ಆಫ್ ಎನ್‌ಕ್ವೈರಿ ಆಂಡ್ ಡಿಸ್ಟರ್‌ಬೆನ್ಸ್‌ಸ್ ಇನ್ ಬೆಂಗಳೂರು ಸಿಟಿ, ಜುಲೈ, 1928 (ಜನವರಿ 1929) ಕರ್ನಾಟಕ ರಾಜ್ಯಪತ್ರಾಗಾರ ಇಲಾಖೆ, ಬೆಂಗಳೂರು, ಪುಟ. 1–3

2 ಜೇಮ್ಸ್ ಮ್ಯಾನರ್ (1997) ಪೊಲಿಟಿಕಲ್ ಚೇಂಜ್ ಇನ್ ಇಂಡಿಯನ್ ಸ್ಟೇಟ್– ಮೈಸೂರು, 1917–1955, ಮನೋಹರ್, ನವದೆಹಲಿ. ಪುಟ. 63

3 ಸುಂದರರಾವ್ ಬ.ನ. (1985) ಬೆಂಗಳೂರಿನ ಇತಿಹಾಸ, ಅಂಕಿತ ಪುಸ್ತಕ,ಬೆಂಗಳೂರು,ಪುಟ. 519

4 ಜೇಮ್ಸ್ ಮ್ಯಾನರ್ (1977) ಪೂರ್ವೋಕ್ತ, ಪುಟ. 63

5 ವೀರಣ್ಣಗೌಡ ಎಚ್. ಕೆ (1974) ಬದುಕು ಮೆಲಕು ಎಚ್.ಕೆ. ವೀರಣ್ಣಗೌಡ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ಪುಟ. 97

6 ಸುಂದರರಾವ್ ಬ. ನ. (1985) ಪೂರ್ವೋಕ್ತ, ಪುಟ. 520

7 ಅದೇ, ಪುಟ. 521

8 ವೀರಕೇಸರಿ ಪತ್ರಿಕೆ, 1928 ಜುಲೈ, 27

9 ರಿಪೋರ್ಟ್ ಆಫ್ ಎಂ. ವಿಶ್ವೇಶ್ವರಯ್ಯ ಕಮಿಟಿ (ಜನವರಿ 1929) ಪೂರ್ವೋಕ್ತ, ಪುಟ. 14–16

10 ವೀರಣ್ಣಗೌಡ ಎಚ್.ಕೆ. (1974) ಪೂರ್ವೋಕ್ತ, ಪುಟ. 97–99

11 ಹೋಮ್ ಪೊಲಿಟಿಕಲ್ ಫೈಲ್ ನಂ.18/10/1930–ಡಿಒ.ನಂ.8518.2,

12 ರಿಪೋರ್ಟ್ ಆಫ್ ಎಂ.ವಿಶ್ವೇಶ್ವರಯ್ಯ ಕಮಿಟಿ (ಜನವರಿ 1929) ಪೂರ್ವೋಕ್ತ, ಪುಟ. 7

13 ಅದೇ, ಪುಟ. 14

14 ಅದೇ, ಪುಟ. 22

15 ನಾರಾಯಣರಾವ್.ವಿ.ಎಸ್.(1975) ಮಿರ್ಜಾ ಇಸ್ಮಾಯಿಲ್ ಅವರ ಜೀವನ ಚರಿತ್ರೆ,ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟ. 30

16 ಅದೇ, ಪುಟ. 30

17 ಚಿನ್ನಸ್ವಾಮಿ ಸೋಸಲೆ (ಸಂ) (2012)ದಿವಾನ್ ಸರ್ ಮಿರ್ಜಾ ಎಂ ಇಸ್ಮಾಯಿಲ್ ಕಾಲದ ಮೈಸೂರು ,ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ. 263

18 ಸುಂದರರಾವ್ ಬ.ನ (1985) ಪೂರ್ವೋಕ್ತ, ಪುಟ. 537

19 ತಿರುಮಲೆ ತಾತಾಚಾರ್ಯ ಶ್ರರ್ಮ,ಭಾರತ ರತ್ನ ಎಂ.ವಿ.ವಿಶ್ವೇಶ್ವರಯ್ಯ, ಲೋಕ ಶಿಕ್ಷಣ ಟ್ರಸ್ಟ್, ಪುಟ. 82–83

[20] ರಿಪೋರ್ಟ್ ಆಫ್ ಎಂ. ವಿಶ್ವೇಶ್ವರಯ್ಯ ಕಮಿಟಿ (ಜನವರಿ 1929) ಪೂರ್ವೋಕ್ತ, ಪುಟ. 5–57

[21] ವೀರಣ್ಣಗೌಡ ಎಚ್.ಕೆ. (1974) ಪೂರ್ವೋಕ್ತ, ಪುಟ. 100

[22] ದಿವಾನ್ ಆಡ್ರೆಸ್ ಟು ರೆಪ್ರೆಸೆಂಟೇಟಿವ್ ಅಸೆಂಬ್ಲಿ, ಪ್ರೋಸಿಡಿಂಗ್ಸ್ ಆಫ್ ಎಂಆರ್ಎ, ದಸರ ಸೆಷನ್, ಅಕ್ಟೋಬರ್, 1928

[23] ನಾರಾಯಣ ರಾವ್ ವಿ.ಎಸ್. (1975) ಪೂರ್ವೋಕ್ತ, ಪುಟ. 32

[24] ರಿಪೋರ್ಟ್ ಆಫ್ ಎಂ. ವಿಶ್ವೇಶ್ವರಯ್ಯ ಕಮಿಟಿ (ಜನವರಿ 1929) ಪೂರ್ವೋಕ್ತ, ಪುಟ. 70

[25] ಪ್ರೊಸೀಡಿಂಗ್ಸ್ ಆಫ್ ಮೈಸೂರ್ ಲೆಜಿಸ್ಲೇಟಿವ್ ಕೌನ್ಸಿಲ್, ಡಿಸೆಂಬರ್, 1929, ಪುಟ. 243–263

[26] ತಿರುಮಲ ಶ್ರೀರಂಗಚಾರ್ಯ ಮತ್ತು ಎಂ. ಕುಮಾರಸ್ವಾಮಿ (ಸಂ) ತಿರುಮಲೆ ತಾತಾಚಾರ್ಯ ಶರ್ಮರ ಮೈಸೂರು ಸಂಸ್ಥಾನದ ವೃತ್ತ ಪತ್ರಿಕಾ ಇತಿಹಾಸ (ಲೇಖನಗಳ ಸಂಕಲನ) ನವನೀತ ಪ್ರಕಾಶನ, ಬೆಂಗಳೂರು, ಪುಟ. 115–116

[27] ಪ್ರೋಸಿಡಿಂಗ್ಸ್ ಆಫ್ ಮೈಸೂರ್ ರೆಪ್ರೆಸೆಟೇಟಿವ್ ಆಸೆಂಬ್ಲಿ, ದಸರಾ ಸೆಷನ್, ಅಕ್ಟೋಬರ್, 1928, ಪುಟ. 148